A6

# ಕರ್ನಾಟಕ ವಿಧಾನ ಪರಿಷತ್ತು

## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಉತ್ತರ

**ಪ್ರಶ್ನೆ:**

ರಾಜ್ಯದಲ್ಲಿ ಸ್ಥಳೀಯ ಜಿಲ್ಲಾ ಮಟ್ಟದ ಪತ್ರಿಕೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಅನೇಕ ಕ್ರಮಗಳನ್ನು ಹಿಂದಿನ ಸರ್ಕಾರ ಜರುಗಿಸಿತ್ತು. ಆದರೆ, ಸ್ಥಳೀಯ ಪತ್ರಿಕೆಗಳು ಮಾಧ್ಯಮ ಪಟ್ಟಿಗೆ ಸೇರಿ ಐದು ವರ್ಷ ಪೂರೈಸಿದ ಬಳಿಕ ಅವುಗಳಿಗೆ ಆರ್ಥಿಕ ಬಲ ತುಂಬಲು ಪ್ರತಿ ಎರಡು ಪುಟ ಪ್ರೋತ್ಸಾಹಕರವಾಗಿ ಎಸ್. ಸಿ, ಎಸ್. ಟಿ, ಒಬಿಸಿ ಹಾಗೂ ಬ್ರಾಹ್ಮಣ ಸಮುದಾಯದ ಪತ್ರಿಕೆಗಳಿಗೆ ಜಾಹಿರಾತು ನೀಡಲಾಗುತ್ತಿತ್ತು. ಆದರೆ, ಪ್ರಸ್ತುತ ರಾಜ್ಯ ಸರ್ಕಾರ ಎಸ್. ಸಿ, ಎಸ್. ಟಿ ಸಂಪಾದಕತ್ವದ ಜಿಲ್ಲಾ ಮಟ್ಟದ ಪತ್ರಿಕೆಗಳು ಮಾಧ್ಯಮ ಪಟ್ಟಿಗೆ ಸೇರ್ಪಡೆ ಆಗುತ್ತಿದ್ದಂತೆ ಪ್ರತಿ ತಿಂಗಳು ಒಂದು ಪುಟ ಪ್ರೋತ್ಸಾಹಕರ ಜಾಹೀರಾತು ನೀಡಲು ಆರಂಭಿಸಲಾಗಿದೆ. ವಾಸ್ತವವಾಗಿ ಸಂಪಾದಕರಾದ ಬಹುತೇಕರು ಪತ್ರಿಕೋದ್ಯಮದಲ್ಲಿ ಪದವಿ ಪಡೆದ ಜನರು ತುಂಬಾ ಕಡಿಮೆ ಸಂಖ್ಯೆಯಲ್ಲಿರುವಂಥದ್ದು.

ಇದರಿಂದ, ಸ್ಥಳೀಯ ಮಟ್ಟದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿಕೊಂಡು ನಡೆಸುವ ಸ್ಥಳೀಯ ಜಿಲ್ಲಾ ಮಟ್ಟದ ಪತ್ರಿಕೆಗಳಿಗೆ ತುಂಬಾ ಕಷ್ಟವಾಗುತ್ತದೆ. ರಾಜ್ಯದ ಯಾವುದೇ ವಿಶ್ವ ವಿದ್ಯಾಲಯದಲ್ಲಿ ರೆಗ್ಯೂಲರ್ ಆಗಿ ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಸ್ಥಳೀಯ ಮಟ್ಟದ ಪತ್ರಿಕೆ ಆರಂಭಿಸಿ ಮಾಧ್ಯಮ ಪಟ್ಟಿಗೆ ಸೇರ್ಪಡೆ ಆಗುತ್ತಿದ್ದಂತೆ, ಪ್ರತಿ ತಿಂಗಳು ಪ್ರೋತ್ಸಾಹಕರವಾಗಿ ಎರಡು ಪುಟ ಜಾಹೀರಾತು ನೀಡುವುದು ತುಂಬಾ ಅಗತ್ಯವಿದೆ. ರಾಜ್ಯ ಸರ್ಕಾರ ವಿಶೇಷ ಸೌಲಭ್ಯ ನೀಡದೇ ಹೋದಲ್ಲಿ ಸ್ನಾತಕೊತ್ತರ ಪದವಿ ಪಡೆದು, ಸ್ಥಳೀಯ ಪತ್ರಿಕೆ ಆರಂಭಿಸಿ, ಮಾಧ್ಯಮ ಪಟ್ಟಿಗೆ ಸೇರಿದ ಬಳಿಕವೂ ಪ್ರೋತ್ಸಾಹಕರ ಜಾಹೀರಾತುಗಾಗಿ ಐದು ವರ್ಷ ಕಾಯುವುದು ಬಹಳ ಕಷ್ಟವಾಗುತ್ತಿದೆ ಎಂದು ತಿಳಿದು ಬಂದಿದೆ.

ರಾಜ್ಯ ಸರ್ಕಾರ ತಕ್ಷಣವೇ ಹೊಸ ನೀತಿಯನ್ನು ರೂಪಿಸುವ ಮೂಲಕ ಪತ್ರಿಕೋದ್ಯಮ ವಿಷಯದಲ್ಲಿ ರೆಗ್ಯೂಲರ್ ಆಗಿ ಸ್ನಾತಕೋತ್ತರ ಪದವಿ ಪಡೆದು ಸ್ಥಳೀಯ ಜಿಲ್ಲಾ ಮಟ್ಟದ ಕನ್ನಡ ದಿನಪತ್ರಿಕೆ ಆರಂಭಿಸಿರುವ ಸಂಪಾದಕರ ಹಿತ ಕಾಯುವ ದೃಷ್ಟಿಯಿಂದ ಪ್ರತಿ ತಿಂಗಳು ಎರಡು ಪುಟ ಜಾಹೀರಾತು ವ್ಯವಸ್ಥೆ ಮಾಡಬೇಕಾದ ಅವಶ್ಯಕತೆ ಇದೆ ಎಂದು ತಿಳಿಸುತ್ತಾ, ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಉತ್ತರ :**

ಸರ್ಕಾರದಿಂದ ಸಣ್ಣ ಮತ್ತು ಮಧ್ಯಮ ಪತ್ರಿಕೆಗಳ ಬೆಳವಣಿಗಾಗಿ 2014 ರಲ್ಲಿ ಜಾಹೀರಾತು ಅನುಷ್ಠಾನ ನಿಯಮಗಳನ್ನು ಜಾರಿಗೆ ತರಲಾಗಿದೆ. ಈ ನಿಯಮಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮಾಲೀಕತ್ವ ಮತ್ತು ಸಂಪಾದಕತ್ವದಲ್ಲಿ ಪ್ರಕಟವಾಗುವ ಪತ್ರಿಕೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಪ್ರತಿ ಮಾಹೆ ಒಂದು ಪುಟದ ಪ್ರೋತ್ಸಾಹ ರೂಪದ ಜಾಹೀರಾತನ್ನು ಬಿಡುಗಡೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮಾಲೀಕತ್ವ ಮತ್ತು ಸಂಪಾದಕತ್ವದಲ್ಲಿ ಪ್ರಕಟವಾಗುವ ಪತ್ರಿಕೆಗಳಿಗೆ ಪ್ರತಿ ಮಾಹೆ ಒಂದು ಪುಟದ ಜಾಹೀರಾತು ಬಿಡುಗಡೆ ಮಾಡಲಾಗುತ್ತಿದೆ.

ರಾಜ್ಯದ ಯಾವುದೇ ವಿಶ್ವ ವಿದ್ಯಾಲಯದಲ್ಲಿ ರೆಗ್ಯೂಲರ್ ಆಗಿ ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಸ್ಥಳೀಯ ಮಟ್ಟದ ಪತ್ರಿಕೆ ಆರಂಭಿಸಿ ಮಾಧ್ಯಮ ಪಟ್ಟಿಗೆ ಸೇರ್ಪಡೆ ಆಗುತ್ತಿದ್ದಂತೆ, ಪ್ರತಿ ತಿಂಗಳು ಪ್ರೋತ್ಸಾಹಕರವಾಗಿ ಎರಡು ಪುಟ ಜಾಹೀರಾತು ನೀಡುವ ಬಗ್ಗೆ ಪರಿಶೀಲಿಸಲಾಗುವುದು.

(ಸಿದ್ದರಾಮಯ್ಯ)
ಮುಖ್ಯಮಂತ್ರಿ

**ಸಂಖ್ಯೆ: ಕೆಸಿಐ-ಪಿಐಪಿ/207/2024**